ಒಳಗಿಂದ ಏನೋ ಅಡಚಣೆಯ ತರಂಗಗಳು ಅಡ್ಡಿ ಪಡಿಸುತ್ತಿರುವಂತೆ ತೋರುತ್ತಿವೆ. ಹಾರಾಡಲು ಆಗದಂತೆ, ತಡೆಯುತ್ತಿವೆ. ಆದರೂ ಆಕಾಶದ ಕೆಳಗೆ ಭೂಮಿಯ ಮೇಲೆ ಹಾರುತ್ತಿರುವ ಹಕ್ಕಿಯಂತೆ, ಬೀಸುವ ಗಾಳಿಗೆ ಆ ಕಡೆ ಈ ಕಡೆ ವಿಮಾನದಂತೆ ತಲೆ ತಿರುಗಿಸುತ್ತ ಗಾಳಿಯಲ್ಲಿ ಸಮತೋಲನೆಯನ್ನು ಕಾಪಾಡಿಕೊಳ್ಳುತ್ತ ಸಾಗುತ್ತೇನೆ. ತಲೆ ಮೇಲಿರುವ ಜುಟ್ಟು, ಬೆನ್ನಿನ ಮೇಲಿರುವ ರೆಕ್ಕೆಗಳು, ಎಲ್ಲದರ ಹಿಂದೆ ಇರುವ ಜೀವವಿಕಾಸದ ಕೊಂಡಿ, ಬಾಲ ಹಿಂದೆಯೇ ಹಾರಿ ಬರುತ್ತಿದೆ. ಈ ಕೊಂಡಿಯಲ್ಲಿ ಮಿಲಿಯಾಂತರ ವರ್ಷಗಳ ವೈಜ್ಞಾನಿಕ ಆಲೋಚನೆಗಳ **Compact disk** ಸೇರಿಕೊಂಡಿದೆ? ಕೆಲವೊಮ್ಮೆ ಈ ಬಾಲ ಹಿಂದೆ ಇದೆಯೊ ಇಲ್ಲ ಕಡಿದು ಬಿದ್ದಿದೆಯೊ ಎಂಬ ಆತಂಕ ಹುಟ್ಟುತ್ತದೆ. ಪಾಪ, ಬಾಲಕ್ಕೂ ಅದೇ ರೀತಿಯ ಆತಂಕ ಇರಲೇಬೇಕು? ಜುಟ್ಟಿನ ಮೇಲೆ ಧ್ರುವಗಳನ್ನು ತೋರಿಸುವಂತಿದೆ.

ಕಣ್ಣು ಮುಚ್ಚಿಕೊಂಡಿದ್ದೇನೆ. ಯಾವುದೋ ಲೋಕಗಳು ಕಣ್ಣುಗಳ ಮುಂದೆ ತೆರೆದುಕೊಳ್ಳುತ್ತಾ ಹೋಗುತ್ತಿವೆ. ಅವು ಯಾವ ಕಾಲಕ್ಕೆ ಸೇರಿದವೊ ಗೊತ್ತಾಗಲಿಲ್ಲ. ಕತೆಗಳೋ ಕವಿತೆಗಳೋ ಜನಪದವೋ ಅದೂ ತಿಳಿಯಲಿಲ್ಲ. ಮನುಷ್ಯರು ಕಂಡು ಹಿಡಿದಿರುವ ಕಾಲ ಇಲ್ಲಿ ಕಾಣಿಸುತ್ತಿಲ್ಲ. ಮನುಷ್ಯರು ಎಷ್ಟು ಕಾಲದ ಹಿಂದಿನ ಜನರೋ ಪ್ರಾಣಿಗಳೋ ಹಿಡಿದುಕೊಳ್ಳಲು ಹೋದಾಗ ಅವರು ಕೈಗೆ ಸಿಗದೆ ದೂರ ಹೊಗುತ್ತಿದ್ದಾರೆ. ಈ ಜನರ ಹಾವಭಾವ, ಚಲನೆ, ಅವರು ಧರಿಸಿರುವ ಬಟ್ಟೆಬರೆ, ಆ ಸೂರ್ಯನ ಬೆಳಕು (ನಮ್ಮ ಸೂರ್ಯನೋ ಬೇರೆ ಪ್ರಪಂಚದ ಸೂರ್ಯನೋ ಗೊತ್ತಿಲ್ಲ) ಗಿಡಮರ, ಬೆಟ್ಟಗುಡ್ಡ, ಕಾಡು ಕಣಿವೆ, ನದಿಗಳು, ಆಕಾಶ ಎಲ್ಲವೂ ಇವೆ ಈ ಭೂಮಿಯ ಮೇಲೆ. ಆದರೆ ಭೂಮಿಯೇ ಹಾರಾಡುತ್ತಿದೆಯೊ? ಉಯ್ಯಾಲೆ ಆಡುತ್ತಿದೆಯೊ ತಿಳಿಯುತ್ತಿಲ್ಲ?

ನಾನು ಎಲ್ಲಿದ್ದೀನಿ? ನನ್ನ ಸುತ್ತಲೂ ಏನೇನಿದೆ? ಒಂದೂ ಗೊತ್ತಾಗುತ್ತಿಲ್ಲ. ಏಳಲು ಪ್ರಯತ್ನಿಸುತ್ತಿದ್ದೇನೆ. ಎದ್ದು ಕುಳಿತುಕೊಳ್ಳಲು ಬಹಳ ಕಾಲವಾಗಬಹುದು. ಆದರೂ ಬಿಡದೇ ಪ್ರಯತ್ನಿಸುತ್ತೇನೆ. ಯಾವತ್ತಾದರೂ ಒಂದು ದಿನ ಗ್ಯಾರಂಟಿಯಾಗಿ ಎದ್ದು ಕುಳಿತುಕೊಳ್ಳುತ್ತೇನೆ. ನನ್ನ ಕನಸಿನಲ್ಲಿ ಕಾಣಿಸಿಕೊಂಡ ಕಾಲ ದೇಶ, ಕೆರೆ ಕುಂಟೆ, ಜನರು, ಕೊನೆಗೆ ಪ್ರಾಣಿಗಳು ಎಲ್ಲದರ ಬಗ್ಗೆ ಜನರಿಗೆ ತಿಳಿಸಬೇಕು.

ಎಲ್ಲವನ್ನು ಪುಸ್ತಕದಲ್ಲಿ ಬರೆದಿಟ್ಟು ನೀವೆಲ್ಲರೂ ಅದನ್ನ ಓದಬೇಕು. ಅದೆಲ್ಲಾ ಸರಿ, ನನಗೆ ಪ್ರಜ್ಞೆ ಬರುವುದು ಯಾವಾಗ? ಅದನ್ನೆಲ್ಲ ಬರೆದಿಡುವುದು ಯಾವಾಗ? ಹಾರಿ ಹಾರಿ ಹಾರಾಡಿ ಸುಸ್ತಾದ ನನಗೆ ಇನ್ನು ಮುಂದೆ ಹೋಗುವುದು ಕಷ್ಟ ಎನಿಸುತ್ತಿದೆ. ಹೀಗೆ ಅರೆ ಪ್ರಜ್ಞಾವಸ್ಥೆಯಲ್ಲಿ ನಿದ್ದೆಪ್ರಜ್ಞೆಗಳ ಮಧ್ಯೆ ತೊಳಲಾಡುತ್ತಿದ್ದಾಗ ಕನಸುಗಳಲ್ಲಿ ಕಂಡ ಕತೆಗಳು ನನ್ನ ಕೈಗೆ ಸಿಕ್ಕಿ ಸಿಗದೆ ಹಾರಿ ಹೋಗುತ್ತಿವೆ. ಮುಂದೆಯೂ ಹಾಗೇ ಆಗುತ್ತದೆಯೊ ಏನೋ? ಸ್ವಲ್ಪ ತಡೆಯಿರಿ? ಅರೆ ಪ್ರಜ್ಞಾವಸ್ಥಿತಿಯಿಂದ ವಾಸ್ತವ ಬಾಗಿಲಿನ ಹತ್ತಿರಕ್ಕೆ ಬರುತ್ತಿರುವೆ. ನೀರವ ರಾತ್ರಿ, ಎಲ್ಲವೂ ನಿಶ್ಯಬ್ದ. ಆದರೂ ಪ್ರಕೃತಿ ಎಂದಿನಂತೆ ಅನೇಕ ರೀತಿಯ ಚಟುವಟಿಕೆಗಳಲ್ಲಿ ತೊಡಗಿದೆ. ನಿಶ್ಯಬ್ದದಿಂದ ಸದ್ದಿನ ಕಡೆಗೆ, ಕಿವಿಗಳಿಗೆ ಏನೋ ಕೇಳಿಸುತ್ತಿದೆ. ನಾಲ್ಕು ಕಡೆ ಗೋಡೆಗಳು, ಒಂದು ಗೋಡೆಯಲ್ಲಿ ಬಾಗಿಲು ಅರೆ ತೆರೆದುಕೊಂಡು ದಾರಿ ಇಲ್ಲಿದೆ ಬಾ ಎನ್ನುತ್ತಿದೆ. ಈಗ ಕಣ್ಣು ಬಿಟ್ಟುಕೊಂಡು ನೋಡುತ್ತೇನೆ? ಈಗಲೂ ನನ್ನ ನಿಜರ್‌ಜೀವ ದೇಹ ನನ್ನ ಮುಂದೆ ಹಾಗೆ ಬಿದ್ದುಕೊಂಡಿದೆ. ಜನರೂ ನನ್ನ ಸುತ್ತಲೂ ಹಾಗೆ ಕುಳಿತೂ, ನಿಂತೂ ಗಲಿಬಿಲಿ ಎಬ್ಬಿಸುತ್ತಿದ್ದಾರೆ.

2000 ರಿಂದ 2020ರ ದಶಕಗಳ ಮಧ್ಯೆ...

ಈಗ ನನ್ನ ಆತ್ಮವೊ ಪ್ರೇತಾತ್ಮವೊ ಬಿಸಿಲಿಗೆ ತಾಳಲಾರದೆ ಗೋಡೆಯ ಮೇಲಿಂದ ಎದ್ದುಬಿದ್ದು ಹೇಗೊ ನುಗ್ಗೆ ಮರದ ಕೊಂಬೆಗಳ ಮಧ್ಯೆ ಕುಳಿತುಕೊಂಡಿತ್ತು. ಆ ನುಗ್ಗೆ ಮರದ ಮೇಲೆ ಮಾವಿನ ಮರದ ನೆರಳು ಬಿದ್ದು ಬಿಸಿಲಲ್ಲಿ ವಿಲವಿಲನೆ ಒದ್ದಾಡುತ್ತಿದ್ದ ನನ್ನ ಪ್ರೇತ ಪ್ರಾಣಕ್ಕೆ ಈಗ ಸ್ವಲ್ಪ ಸಮಾಧಾನ ಸಿಕ್ಕಿತ್ತು. ಯಾಕೊ ಏನೊ ನುಗ್ಗೆ ಮರದ ಬಗ್ಗೆ ಜನರಿಗೆ ಗುಮಾನಿ ಇದೆ. ಯಾರಾದರು ನುಗ್ಗೆ ಮರದ ಮೇಲೆ ಹತ್ತಿದರೆ, ಹಿರಿಯರು `ಏಹ್ ಇಳಿಯೊ. ನಿನಗೆ ಬುದ್ಧಿ ಇದಿಯೇನೊ. ಹೋಗಿ ಹೋಗಿ ನುಗ್ಗೆ ಮರದ ಮೇಲೆ ಹತ್ತಿದ್ದೀಯ?' ಎಂದು ಗದರಿಸಿ ಮರದಿಂದ ಕೆಳಕ್ಕೆ ಇಳಿಸುತ್ತಿದ್ದರು. ಅದರ ಮೇಲೆ ಹತ್ತಿದರೆ ಮೃದುವಾದ ಅದರ ಕೊಂಬೆಗಳು ಮುರಿದು ಮರದ ಮೇಲೆ ಹತ್ತಿದವರು ಕೆಳಕ್ಕೆ ಬಿದ್ದು ಕೈಕಾಲು ಸೊಂಟ ಮುರಿದುಕೊಳ್ಳುತ್ತಾರೆ ಎನ್ನುವ ಕಾರಣದಿಂದ ಹಾಗೇ ಹೇಳುತ್ತಾರೆ. ಕೆಲವರು ನುಗ್ಗೆ ಮರದಲ್ಲಿ ದೆವ್ವಗಳು ಇರುತ್ತವೆ ಎಂದೂ ಹೇಳುತ್ತಾರೆ. ಬಹುಶಃ ಅದಕ್ಕೆ ಉದಾಹರಣೆ ಈಗ ನಾನು ಕುಳಿತಿರುವ ಕಾರಣವೂ ಇರಬಹುದು. ಒಟ್ಟಿನಲ್ಲಿ ಈ ನುಗ್ಗೆ ಮರದಲ್ಲಿ ಏನೊ ಮಹಿಮೆ ಇರುವಂತೆ ತೋರುತ್ತದೆ.

ಇನ್ನು ಹುಣಿಸೆ ಮರದ ಮೇಲೂ ದೆವ್ವಗಳು, ಕ್ಷುದ್ರ ಶಕ್ತಿಗಳು ವಾಸಿಸುತ್ತವೆ ಎನ್ನುವ ಮಾತನ್ನು ಕೇಳಿದ್ದೇನೆ. ಸಾಧ್ಯವಾದರೆ ನನ್ನ ಅಂತ್ಯಸಂಸ್ಕಾರ ಆದ ಮೇಲೆ ಹುಣಿಸೆ ಮರಗಳ ಮೇಲೆ ದೆವ್ವಗಳು, ಕ್ಷುದ್ರ ಶಕ್ತಿಗಳು ವಾಸಿಸುತ್ತವೊ ಇಲ್ಲವೊ ನೋಡಿ ದೃಢಪಡಿಸಿಕೊಳ್ಳಬೇಕು ಎಂದುಕೊಂಡಿದ್ದೇನೆ. ಹುಣಿಸೆ ಮರಗಳು ತುಂಬಾ ಕಡಿಮೆ ಆಮ್ಲಜನಕವನ್ನು ಬಿಡುಗಡೆ ಮಾಡುತ್ತವೆ. ಆದ್ದರಿಂದ ಅದರ ಕೆಳಗೆ ಇದ್ದರೆ ಅಥವಾ ಆ ಮರಗಳ ಕೆಳಗೆ ಮನುಷ್ಯರು ನಿದ್ದೆ ಮಾಡಿದರೆ ಉಸಿರು ಕಟ್ಟಿದಂತಾಗುತ್ತದೆ ಎಂಬ ಮಾತುಗಳನ್ನು ಕೇಳಿದ್ದೇನೆ. ಈಗ ಮಧ್ಯಾಹ್ನ ಎರಡು ಗಂಟೆ. ಒಳ್ಳೆಯ ನಿಗಿನಿಗಿ ಬಿಸಿಲು. ಜನರೆಲ್ಲ ಅಲ್ಲಿಇಲ್ಲಿ ಗಿಡಮರಗಳ ಕೆಳಗೆ ಕುಳಿತು ನಿಂತು ಮಾತನಾಡುತ್ತಿದ್ದಾರೆ. ನನ್ನ ಹೆಣವನ್ನು ನೋಡಲು ಯಾರು ಯಾರೋ ಯಾವುದ್ಯಾವುದೊ ಊರುಗಳಿಂದ ಜನರು ಬರುತ್ತಿದ್ದಾರೆ. ತಮಟೆ ಇತರ ವಾದ್ಯಗಳನ್ನು ಬಾರಿಸುವವರು ಜೋರಾಗಿ ಬಾರಿಸುತ್ತಿದ್ದಾರೆ. ಅವರ ಮುಂದೆ ಸಣ್ಣಪುಟ್ಟ ಹುಡುಗರು ಮತ್ತು ಕೆಲವು ಕುಡುಕರು ಕೈಕಾಲುಗಳು ಹೇಗೆ ತಿರುಗುತ್ತವೊ ಹಾಗೆ ತಿರುಗಿಸುತ್ತ ಕುಣಿಯುತ್ತಿದ್ದಾರೆ. ಅವರೆಲ್ಲ ಪಾಪ ನನ್ನ ಮುಂದೆ ಬೆವರು ಸುರಿಸಿಕೊಂಡು ಕುಣಿಯುತ್ತಿದ್ದಾರೆ. ನಾನು ಬದುಕಿದ್ದರೆ ಅವರಿಗೆಲ್ಲ ಸ್ವಲ್ಪಸ್ವಲ್ಪ ಹಣ ಕೊಡುತ್ತಿದ್ದೆ. ಇದೆಲ್ಲ ನನ್ನ ಊರಿನವರು ನನ್ನ ಮೇಲೆ ಇಟ್ಟಿರುವ ಪ್ರೀತಿ ಎನ್ನಬೇಕು.

ಹುಟ್ಟಿದ ಎಲ್ಲರೂ ಮುಂದೆ ಒಂದು ದಿನ ತಮ್ಮ ಊರಿನ ಮಣ್ಣಿನಲ್ಲಿ ಮಣ್ಣಾಗಬೇಕು. ಇಲ್ಲ ಬೆಂಗಳೂರಿನ ವಿದ್ಯುತ್ ಚಿತಾಗಾರದಲ್ಲಿ ಬೂದಿಯಾಗಬೇಕು. ಚಿತಾಗಾರದಲ್ಲಿ ಬೂದಿ ಮಾಡಿದವರು ಆ ಬೂದಿಯನ್ನು ತೆಗೆದುಕೊಂಡು ಹೋಗಿ ಎಲ್ಲೆಲ್ಲೊ ನದಿಗಳಲ್ಲಿ ಬೆರೆಸಿ ನದಿಗಳನ್ನೆಲ್ಲ ಮಲಿನ ಮಾಡಿ ಬಿಡುತ್ತಾರೆ. ಯಾವುದೋ ಕಾಲದಲ್ಲಿ ಜನಸಂಖ್ಯೆ ತೀರಾ ವಿರಳವಾಗಿದ್ದ ಕಾಲದಲ್ಲಿ ಹಾಗೆ ಮಾಡಿದರೆ ನದಿಗಳಿಗೆ ತೊಂದರೆ ಇರಲಿಲ್ಲ. ಆದರೆ ಈಗಿನ ಕಾಲದಲ್ಲಿ ಇಡೀ ಭೂಮಿಯ ಮೇಲೆಲ್ಲ ಜನರೇ ತುಂಬಿರುವಾಗ ಜನರನ್ನು ಸುಡುವುದು ಮತ್ತು ಚಿತಾಗಾರಗಳಲ್ಲಿ ಸುಟ್ಟ ಆ ಬೂದಿಯಿಂದ ನದಿಗಳನ್ನು ಕೊಳಕು ಮಾಡುವುದು ನಿಜವಾಗಿಯೂ ಕೆಟ್ಟ ಆಚರಣೆಯಾಗಿದೆ. ಇನ್ನು ಹೆಣಗಳನ್ನು ಸುಡುವುದು ಕೂಡ ಕೆಟ್ಟ ಕೆಲಸವೇ ಆಗಿದೆ. ಏಕೆಂದರೆ ಅದಕ್ಕೆ ಹೇರಳ ಸೌದೆಯನ್ನು ವ್ಯಯಿಸಲಾಗುತ್ತದೆ. ನನಗೇನೊ ನನ್ನ ಹೆಣವನ್ನು ಮಣ್ಣಿನಲ್ಲಿ ಹೂಳುವುದರಿಂದ ತುಂಬಾ ಸಮಾಧಾನವಾಗಿದೆ. ಅದೂ ಕೂಡ ನಾನು ಹುಟ್ಟಿದ ಓಡಾಡಿದ ಮಣ್ಣಿನಲ್ಲಿ. ಕೆರೆಯ ನೀರು ಕೆರೆಗೆ ಚೆಲ್ಲಿ ಎನ್ನುವಂತೆ. ನನ್ನ ಅಪ್ಪ ಅಮ್ಮ, ತಾತ ಅಜ್ಜಿ, ಅವರ ಅಪ್ಪ, ಅಮ್ಮ... ಎಲ್ಲರನ್ನು ನನ್ನವರು ಮಣ್ಣಿನಲ್ಲಿ ಸಮಾಧಿ ಮಾಡಿ ಒಳ್ಳೆಯ ಕೆಲಸವನ್ನೇ ಮಾಡಿದ್ದಾರೆ.

ಸಾಮಾನುಗಳನ್ನು ತರಲು ಪೇಟೆಗೆ ಹೋಗಿದ್ದವರು ಎಲ್ಲವನ್ನು ತೆಗೆದುಕೊಂಡು ಬಂದು ನನ್ನ ತಮ್ಮನ ಕೈಗೆ ಒಪ್ಪಿಸಿದರು. ನನ್ನ ಪತ್ನಿ ಸಾವಿತ್ರಿ ಸ್ವಲ್ಪ ಸುಧಾರಿಸಿಕೊಂಡಂತೆ ಕಾಣುತ್ತಿದ್ದರೂ ನನ್ನ ಎದುರಿಗೆ ಗೋಡೆಗೆ ಒರಗಿಕೊಂಡು ಕಾಲುಗಳನ್ನು ಚಾಚಿಕೊಂಡು ಕುಳಿತಿದ್ದಳು. ತಲೆ ಕೂದಲು ಚೆದುರಿ ಹೋಗಿದ್ದವು. ಮುಖ ಒಂದಷ್ಟು ಬಾಡಿದಂತೆ ಮುಖದಲ್ಲಿ ಎಂದಿನಂತೆ ಇರುತ್ತಿದ್ದ ಕಳೆ ಇಲ್ಲದಾಗಿತ್ತು. ಎಲ್ಲೋ ನೋಡುತ್ತ ಏನೋ ಯೋಚಿಸುತ್ತಿದ್ದಳು. ಅವಳು ಏನು ಯೋಚಿಸುತ್ತಿದ್ದಾಳೆ ಎಂದು ತಿಳಿದುಕೊಳ್ಳುವ ತವಕ ನನಗಿದ್ದರೂ ನನ್ನಿಂದ ಅದು ಸಾಧ್ಯವಾಗಲಿಲ್ಲ. ಬಹುಶಃ ತನ್ನ ಗಂಡ ಸತ್ತಾಗ ತನ್ನ ಇಬ್ಬರ ಮಕ್ಕಳು ಗಂಡನ ಹತ್ತಿರ ಇಲ್ಲವಲ್ಲ ಎಂದು, ನನ್ನ ಗಂಡ ನನ್ನನ್ನ ಬಿಟ್ಟು ಹೋಗಿಬಿಟ್ಟರಲ್ಲ ಎಂಬ ಯೋಚನೆ ಇರಬೇಕು? ನಾನು ಮಾತ್ರ ಇನ್ನೆಷ್ಟು ದಿನ ಬದುಕಬೇಕಾಗಿತ್ತು? ಬದುಕಲು ಸಾಧ್ಯವಿತ್ತು? ಇಷ್ಟಕ್ಕೂ ಕೊನೆಯಲ್ಲಿ ನಾನು ಹೇಗೆ ಸತ್ತೆ? ಏನೂ